ಅಳುವಿಗಿಟ್ಟುಕೊಂಡು, ಅನ್ನ ನೀರು ಮುಟ್ಟದೆ ಮಲಗಿಬಿಟ್ಟಳು. ಗತಿಯಿಲ್ಲದೆ ಚಿಕ್ಕಸವ ಒಂದಷ್ಟು ದಿನ ತೆಪ್ಪಗಾಗಬೇಕಾಯ್ತು.

ಹಿಂಗಿರುವಾಗ ಕಾಟ್ಮಾರಯ್ಯನಿಗೆ ಊಟ, ತಿಂಡಿಗಳ ಮೇಲಿನ ನಿಗಾನೂ ಇಲ್ಲದೆ ಮತ್ತೊಮ್ಮೆ ಹಲ್ವಾಟದ ಮಾತುಗಳಾಡತೊಡಗಿದ. ಕೆಲವೊಮ್ಮೆ ದಿನವಿಡೀ ಮಲಗಿಬಿಡುತ್ತಿದ್ದ. ಏಳುತ್ತಲೇ, 'ಎಲಾ ಮಗಾ ಹಳ್ಳದ್ ದಡ್ದ ತೆಂಗಿನ್ ಸಸೀಲಿ ಗೊನೆ ಮರ್ಕಣಂಗಾಗೈತೆ ಹಗ್ಗ ಹಾಕಿ ಕಟ್ಟಲ್ವೇನೋ, ತ್ವಾಟುದ್ ಹೊಳೆ ಬಾಕ್ಲೂನಾ ಕಟ್ದಂಗೆ ಹಾರೊಡುದ್ರೆ ದನ ಕರ ನುಗ್ಗಿ ಹಾಳ್ಮಾಡಲ್ವೇನಪ್ಪ, ಆ ಕೊರಕ್ಲಿಗೊಂದು ಕಲ್ಲಣೆ ಕಟ್ಸಿದ್ರೆ ಮಣ್ಣು ಕೊರ್ಯಾದು ನಿಲ್ತರ್ಲಿಲ್ವ' ವಗೈರೆ ಬಡಬಡಿಸತೊಡಗಿದ. 'ಹಗ್ಲೊತ್ತು ಹೆಂಗಾರ ಮಾಡಿ ಮಲಗ್ದಂಗೆ ನೋಡ್ಕಾಳವ್ವ' ಅಂತ ಅಂದದ್ದರಿಂದ ಸಣ್ಮಾದಮ್ಮ ಹಗಲೊತ್ತು ಗಂಡನನ್ನು ಹತ್ತಿರದಲ್ಲಿದ್ದ ದೇವಸ್ಥಾನಕ್ಕೆ ಕರೆದೊಯ್ದು ಹೊತ್ತು ನೀಗಿಸುತ್ತಿದ್ದಳು. 'ಅಲ್ಗೋಗೋ ದಾರಿ ನಂಗೊತ್ತಿಲ್ವ' ಅಂತ ಒಂದೊಂದು ದಿನ ಕಾಟ್ಮಾರಯ್ಯನೊಬ್ಬನೇ ಹೋಗುತ್ತಿದ್ದ. ಸಣ್ಮಾದಮ್ಮ ಹೂ ಕಟ್ಟುವ ಕೆಲಸದ ನಡುವೆ ಆಗಾಗ ಹೋಗಿ ಗಂಡನನ್ನು ನೋಡಿ ಬರುತ್ತಿದ್ದಳು. ಕಾಟ್ಮಾರಯ್ಯ ಅಲ್ಲೂ ಏನಾದರೊಂದನ್ನು ದಿಟ್ಟಿಸುತ್ತಾ ಕುಳಿತುಬಿಡುತ್ತಿದ್ದ.

ಅದೊಂದು ದಿನ ಹಾಗೆ ಹೋದವನು ಸಂಜೆಯಾದರೂ ಹಿಂದಿರುಗಿರಲಿಲ್ಲ. ಹೂ ಕಟ್ಟೋ ಗ್ಯಾನದಲ್ಲಿ ಸಣ್ಮಾದಮ್ಮನೂ ಅತ್ತ ಹೋಗೋದ ಮರೆತುಬಿಟ್ಟಿದ್ದಳು. ಕೆಲಸದಿಂದ ಬಂದ ಚಿಕ್ಕಸವ ಅಪ್ಪ ಕಾಣದ್ದರಿಂದ ವಿಚಾರಿಸಿದ. 'ಅಯ್ಯೋ ಶಿವ್ನೆ ಎಂಥಾ ಕೆಲ್ಸ ಆಗ್ಬುಡ್ತು ಹಾಳಾದ್ದು' ಅಂತ ದಪ್ಪೆಜ್ಜೆಯಲ್ಲಿ ದೇವಸ್ಥಾನದತ್ತ ನಡೆದು ನೋಡಲು, ಅಲ್ಲೆಲ್ಲೂ ಕಾಟ್ಮಾರಯ್ಯ ಕಾಣದ್ದರಿಂದ, ದಡುಗಿನಲ್ಲಿ ತಿರುಗಿ ಬಂದಾಗ ಚಿಕ್ಕಸವ ದಂಗಾಗಿ ಹೋದ. ಇಷ್ಟು ದೊಡ್ಡ ಊರಲ್ಲಿ ಎಲ್ಲೀಂತ ಹುಡುಕಲಿ, ಯಾರುನ್ನಾಂತ ಕೇಳಲಿ ಅಂದುಕೊಂಡು ನಿಂತನಿಲುವಲ್ಲೇ ಮನೆಯಿಂದ ಹೊರಟ.

ಎಷ್ಟು ರಾಪಾಡಿದರೂ, ಎಲ್ಲಿ ತಡಕಿದರೂ ಸುಳಿವು ಸಿಗದಾದಾಗ ಸಿಟ್ಟು ಬಂದು, 'ತೆಪ್ಗೆ ಮನೇಲಿ ಬಿದ್ದಿರಾದ ಬಿಟ್ಟು' ಅಂತ ಗೊಣಗಿಕೊಂಡರೂ, ಯಾವುದಾದರೂ ಬಸ್ಸಿಗೋ, ಲಾರಿಗೋ

